# DECEMBER 25,2024
# ALL INDIA RADIO- DHARWAD
# PRADESH SAMACHARA (KANNADA) 12PM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಇಂದು ನಾಡಿನೆಲ್ಲೆಡೆ** ಏಸು ಕ್ರಿಸ್ತರ ಜನ್ಮ ದಿನವಾದ ಕ್ರಿಸ್ಮಸ್ ಹಬ್ಬವನ್ನು, ಸಂಭ್ರಮ ಸಡಗರದಿಂದ ಆಚರಿಸಲಾಗುತ್ತಿದೆ. ಪ್ರೀತಿಯ ಮಹತ್ವವನ್ನು ಸಾರುವ ಕ್ರಿಸ್ಮಸ್ ಹಬ್ಬದ ಶುಭ ದಿನದಂದು, ಹಬ್ಬದ ಆಚರಣೆ ಹಾಗೂ ವಿಶೇ 'ತೆಯ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬಾಸೆಲ್ ಮಿಷನ್ ಕರ್ನಾಟಕ ಉತ್ತರ ಸಭಾ ಪ್ರಾಂತದ ಕಾರ್ಯದರ್ಶಿ, ಧಾರವಾಡದ ವಿಲ್ಸನ್ ಜೆ ಮೈಲಿ ಅವರು.

<><><>

**ಬೈಟ್: ವಿಲ್ಸನ್ ಜೆ ಮೈಲಿ 38 ಸೆಕೆಂದುಗಳು**

<><><>

**ರೈತರು ಸಮಗ್ರ ಕೃಷಿ ಪದ್ಧತಿ** ಅಳವಡಿಸಿಕೊಳ್ಳಬೇಕು. ಸಂಘಟಿತರಾಗಿ ಬೇಡಿಕೆಗೆ ಅನುಗುಣವಾದ ಬೆಳೆ ಬೆಳೆದು, ರೈತ ಉತ್ಪಾದಕ ಸಂಸ್ಥೆ ಮೂಲಕ ಬೆಳೆಗಳ ಮೌಲ್ಯವರ್ಧನೆ ಮಾಡಿ, ಉದ್ದಿಮೆದಾರರಾಗಬೇಕು ಎಂದು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಎಸ್.ವಿ ಸುರೇಶ ಹೇಳಿದ್ದಾರೆ. ಧಾರವಾಡದ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ ವಾಲ್ಮಿಯಲ್ಲಿ, ರೈತ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ, ಮಾತನಾಡಿದ ಅವರು, ಕೃಷಿ ಒಂದು ವಿಜ್ಞಾನ, ರೈತರು ಸಾಂಪ್ರದಾಯಿಕ ಕೃಷಿಗೆ ಬದಲಾಗಿ ವೈಜ್ಞಾನಿಕ ನಿಖರ ಕೃಷಿ ಮಾಡಬೇಕು. ಸಮಸ್ಯೆಗಳು, ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

<><><>

**ಕಾಫಿ ಮಂಡಳಿಯಿಂದ,** ಇದೇ ಮೊದಲ ಬಾರಿಗೆ ಡಿಪ್ಲೊಮಾ ಕೋರ್ಸ್ ಆರಂಭಿಸಲಾಗುತ್ತಿದೆ ಎಂದು, ಭಾರತೀಯ ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ. ದಿನೇಶ ತಿಳಿಸಿದ್ದಾರೆ.ಚಿಕ್ಕಮಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಎರಡು ಬಗೆಯ ಕೋರ್ಸ್‌ಗಳನ್ನು ಆರಂಭಿಸಲಾಗುತ್ತಿದೆ. 18 ರಿಂದ 35 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. 10ನೇ ತರಗತಿ ಉತ್ತೀರ್ಣರಾಗಿರಬೇಕು. ಅರ್ಜಿ ಸಲ್ಲಿಸಲು, ಈ ತಿಂಗಳ 31 ಕೊನೆಯ ದಿನವಾಗಿದೆ ಎಂದರು. ಡಿಪ್ಲೊಮಾ ಕೋರ್ಸ್ ಉತ್ತೀರ್ಣರಾದವರಿಗೆ, ಕಾಫಿ ಎಸ್ಟೇಟ್ ಹಾಗೂ ಕಾಫಿ ವಹಿವಾಟಿನಲ್ಲಿ ಉತ್ತಮ ಉದ್ಯೋಗ ಕಂಡುಕೊಳ್ಳಬಹುದಾಗಿದೆ ಎಂದರು.

<><><>

**ಬಯಲಾಟದ ಕಲೆಗಳು** ಯಕ್ಷಗಾನದಂತೆಯೇ ವಿಶ್ವವಿಖ್ಯಾತಗೊಳ್ಳಲು ಪಠ್ಯ, ನೃತ್ಯ, ಹಾಡುಗಾರಿಕೆಯಲ್ಲಿ ಬದಲಾವಣೆಗಳನ್ನು ತಂದು ಶಿಸ್ತುಬದ್ಧವಾಗಿ ಪ್ರದರ್ಶನಗೊಂಡರೆ ತನ್ನ ಗತವೈಭವವನ್ನು ಪಡೆಯುತ್ತವೆ. ಇಂತಹ ಬದಲಾವಣೆಗಳು ಕಾಲದ

ಅಗತ್ಯವೆಂದು ರಾಜ್ಯ ಬಯಲಾಟ ಅಕಾದೆಮಿ ಅಧ್ಯಕ್ಷ ಕೆ.ಆರ್.ದುರ್ಗಾದಾಸ ಹೇಳಿದ್ದಾರೆ. ಧಾರವಾಡ ಕೆ.ಎಲ್.ಇ ಸಂಸ್ಥೆಯ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ವಿಭಾಗ, ಆಯೋಜಿಸಿದ್ದ 'ಬಯಲಾಟ: ಪರಂಪರೆ ಮತ್ತು ಪ್ರಯೋಗ' ಸಂವಾದ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು. ರಾಜ್ಯ ಬಯಲಾಟ ಅಕಾದೆಮಿ, ಕಲಾವಿದರ ಮಾಹಿತಿ ಸಂಗ್ರಹ, ಹಸ್ತಪ್ರತಿ ಸಂಗ್ರಹ ಯೋಜನೆ ಹಾಗೂ ವಿದ್ಯಾರ್ಥಿಗಳಿಗೆ ತರಬೇತಿ ಸೇರಿದಂತೆ, ಕಲಾತಂಡಗಳಿಗೆ ಪ್ರೋತ್ಸಾಹ ಧನ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

<><><>

**ಐತಿಹಾಸಿಕ ಮಹತ್ವವುಳ್ಳ ನಗರಿ ಶಿಕ್ಷಣಕ್ಕೆ,** ಧಾರವಾಡ ಹೆಸರುವಾಸಿಯಾಗಿ, ಶಿಕ್ಷಣ ಕಾಶಿ ಎಂದು ಖ್ಯಾತಿ ಪಡೆಯುವಲ್ಲಿ, ಇಲ್ಲಿನ ಶೈಕ್ಷಣಿಕ ಪರಿಸರ ಹಾಗೂ ಇಲ್ಲಿನ ಸಾಧಕರು ಕಾರಣ ಎಂದು, ಪರಿಸರವಾದಿ, ಖ್ಯಾತ ಚಿತ್ರನಟ ಸುರೇಶ ಹೆಬ್ಳಿಕರ್ ಹೇಳಿದ್ದಾರೆ. ಧಾರವಾಡದ ರಾಯಪುರ ಕೆ.ಎಲ್.ಇ ಶಾಲೆಯ ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಚಟುವಟಿಕೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಧಾರವಾಡದಲ್ಲಿ ಅನೇಕ ಸಾಹಿತಿಗಳು, ತಪಸ್ವಿಗಳು ಹಾಗೂ ವಿದ್ವಾಂಸರು ಹುಟ್ಟಿ ಜಗತ್ತಿಗೆ ಜ್ಞಾನ ಹಂಚಿದ್ದಾರೆ. ನಾವು ಹುಟ್ಟಿದ ನಾಡು ನುಡಿಯನ್ನು ಗೌರವಿಸುವ ಮನೋಭಾವ ನಮ್ಮ ಸ್ವಭಾವವಾಗಬೇಕು, ಎಂದರು.

<><><>

**ಹುಬ್ಬಳ್ಳಿ ಸಾಯಿನಗರದ** ಅಚ್ಚವ್ವನ ಕಾಲೋನಿಯಲ್ಲಿ ಗ್ಯಾಸ್ ಸಿಲೆಂಡರ್ ಸೋರಿಕೆಯಿಂದ ಸಂಭವಿಸಿದ ಅವಘಡದಲ್ಲಿ ಗಂಭೀರ ಗಾಯಗೊಂಡಿರುವ, 9 ಜನ ಮಾಲಾಧಾರಿಗಳಿಗೆ, ಅಂತಾರಾಷ್ಟ್ರೀಯ ಮಾನದಂಡದ ಪ್ರಕಾರ ಚಿಕಿತ್ಸೆ ನೀಡಲಾಗುತ್ತಿದೆ. ಬೆಂಗಳೂರು ಹಾಗೂ ನಗರದ ಎಸ್‌ಡಿಎಂ ವೈದ್ಯರನ್ನು ಕರೆಯಿಸಿ ಸಲಹೆ ಪಡೆಯಲಾಗಿದೆ ಎಂದು ಕೆಎಂಸಿಆರ್‌ಐ ನಿರ್ದೇಶಕ ಎಸ್.ಎಫ್. ಕಮ್ಮಾರ್ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಎರಡು ದಿನ ಗಾಯಾಳುಗಳಿಗೆ ನೀಡಿದ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಿದರು. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ, ಪ್ಲಾಸ್ಟಿಕ್ ಸರ್ಜರಿ ವಿಭಾಗದ ಮುಖ್ಯಸ್ಥರಾದ ಡಾಕ್ಟರ ಸ್ಮಿತಾ ಸೇಗು ಆಗಮಿಸಿ, ಗಾಯಾಳುಗಳ ವೈದ್ಯಕೀಯ ವರದಿ ಪರಿಶೀಲಿಸಿ, ಮುಂದಿನ ಚಿಕಿತ್ಸೆಯ ಬಗ್ಗೆ ಚರ್ಚಿಸಿರುವುದಾಗಿ ತಿಳಿಸಿದರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**

<><><>